# ಹಳೆಗಾಲದ ಬೆಳಕಿಗೆ ಹೊಸಗಾಲದ ಮೈಲತುತ್ತದ ಹೊಡಿಕೆ

ಗೌರಿ

ಅಕ್ಷರ ಕೆ.ವಿ. ಅವರ ‘ಮಾಯದ ಕನ್ನಡಿ’ ಹಲಬಗೆಯ ಬರಹಗಳ ಸಮುಚ್ಚಯ. ಈ ಸಮುಚ್ಚಯವನ್ನವರು ಪ್ರಬಂಧ, ಪ್ರಸ್ತಾಪ, ಸಾಂದರ್ಭಿಕ, ಸಂದರ್ಶನ ಎಂಬ ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಇಲ್ಲಿ ಸುದೀರ್ಘವಾದ ಜಿಜ್ಞಾಸೆಯ ವಿಲಾಸಗಳಿವೆ; ಚಿಕ್ಕ ಚಿಕ್ಕ ಪ್ರತಿಕ್ರಿಯಾರೂಪಿ ಟಿಪ್ಪಣಿಗಳಿವೆ; ವ್ಯಕ್ತಿಚಿತ್ರಗಳಿವೆ; ಮುನ್ನುಡಿಗಳಿವೆ; ಪತ್ರಿಕೆಗಳಿಗೆ ಸಾಂದರ್ಭಿಕವಾಗಿ ಬರೆದುಕೊಟ್ಟ ಕಿರುಲೇಖನಗಳಿವೆ; ಕೊನೆಯಲ್ಲಿ ಅಕ್ಷರ ಅವರದ್ದೇ ಒಂದು ಸಂದರ್ಶನವೂ ಇದೆ.

ಮೇಲ್ನೋಟಕ್ಕೆ ಸ್ವರೂಪ, ಗಾತ್ರ, ಉದ್ದೇಶಗಳಲ್ಲಿ ಬೇರೆ ಆಗಿರುವಂತೆ ಕಂಡರೂ ಇಲ್ಲಿನ ಎಲ್ಲ ಲೇಖನಗಳ ಹಿನ್ನೆಲೆಯನ್ನು ‘ಏಕಸೂತ್ರ’ವೊಂದು ಹೆಣೆದಿರುವಂತೆ ಕಾಣುತ್ತದೆ. ಒಂದು ಸಾಮಾನ್ಯಪ್ರಜ್ಞೆಯ ಸರೋವರದಲ್ಲಿ ತಲೆ ಹೊರಗೆ ಹಾಕಿರುವ ಬೇರೆ ಬೇರೆ ದ್ವೀಪಗಳ ಹಾಗೆ ಈ ಲೇಖನಗಳು ಬೇರೆಯಾಗಿ ಕಾಣಿಸುತ್ತಿವೆಯಷ್ಟೆ. ಈ ಮಾತನ್ನು ಬರೀ ಈ ಪುಸ್ತಕದ ಮಟ್ಟಿಗಲ್ಲ, ಅಕ್ಷರ ಅವರು ಇತ್ತೀಚೆಗೆ ಬರೆದಿರುವ ನಾಟಕಗಳು, ಶಂಕರರ ಕುರಿತಾದ ಕೃತಿಗೂ ಅನ್ವಯಿಸಬಹುದು.

ಹಾಗಾದರೆ ಇಲ್ಲಿನ ಎಲ್ಲ ಲೇಖನಗಳ ಹಿಂದಿರುವ ಆ ಏಕಸೂತ್ರ ಯಾವುದು? ಆ ಸೂತ್ರದ ಮೂಲಕ ಅಕ್ಷರ ಯಾವ ಹುಡುಕಾಟದಲ್ಲಿದ್ದಾರೆ? ಅವರೇ ಹೇಳಿಕೊಂಡಿರುವ ಹಾಗೆ ‘ಶಂಕರ ವಿಹಾರ’ದಲ್ಲಿ ಪ್ರಾರಂಭಿಸಿರುವ ಅದ್ವೈತ ಸಿದ್ಧಾಂತದ ಆಧುನಿಕ ಆವಿಷ್ಕಾರದ ಪ್ರಯತ್ನ ಇಲ್ಲಿದೆ. ಇಷ್ಟೇ ಹೇಳಿದರೆ ಇದೊಂದು ತತ್ತ್ವಶಾಸ್ತ್ರದ ಒಂದು ಶಾಖೆಯ ಅಧ್ಯಯನದ ಕೃತಿ ಎಂಬ ಭಾವ ಮೂಡಿಬಿಡುವ ಅಪಾಯವಿದೆ. ಆದ್ದರಿಂದ ಮೇಲಿನ ಪ್ರಶ್ನೆಗಳಿಗೆ ನಾವು ಕೊಂಚ ಭಿನ್ನವಾಗಿ, ಕೃತಿಯ ಒಳಗಿನದ್ದೇ ಎರಡು ಉಲ್ಲೇಖಗಳ ಮೂಲಕ ಮುಖಾಮುಖಿಯಾಗಲು ಯತ್ನಿಸಬಹುದು.

ಈ ಕೃತಿಯ ಮೊದಲ ಪ್ರಬಂಧ ‘ಮಾಯದ ಕನ್ನಡಿ’ಯಲ್ಲಿ ಒಂದು ಸನ್ನಿವೇಶವಿದೆ. ಲೇಖಕರು ಸುಮಾರು ಮೂವತ್ತು ವರ್ಷಗಳ ಹಿಂದಿನ ಅನುಭವವನ್ನು ಕಥನದ ರೂಪದಲ್ಲಿ ಬರೆದಿದ್ದಾರೆ. ‘ಅದರಲ್ಲಿ ನಿಜವಾಗಿ ನಡೆದದ್ದು ಯಾವುದು, ಆಮೇಲೆ ನನ್ನ ಮನಸ್ಸು ಕೂಡಿಸಿದ್ದು ಯಾವುದು’ ಎಂಬುದೂ ಅವರಿಗೆ ಸ್ಪಷ್ಟವಿಲ್ಲ.

ದೆಹಲಿ ನಾಟಕಶಾಲೆಯಲ್ಲಿ ಓದುತ್ತಿದ್ದಾಗ ಲೇಖಕರು ತಮ್ಮ ಮೂವರು ಸಹಪಾಠಿಗಳೊಂದಿಗೆ ಕೇರಳ ಪ್ರವಾಸಕ್ಕೆ ಹೋಗಿದ್ದಾರೆ. ಕೇರಳದ ಸಾಂಪ್ರದಾಯಿಕ ರಂಗಪ್ರಕಾರಗಳನ್ನು ನೋಡಿಕೊಂಡು ಬರುವುದು ಆ ಪ್ರವಾಸದ ಉದ್ದೇಶ. ಹಾಗೆ ತೆಯ್ಯಮ್ ನೋಡಲು ಕೇರಳದ ಕಣ್ಣೂರಿಗೆ ಬಂದಿದ್ದಾರೆ. ಅಲ್ಲಿನ ಜನಜಾತ್ರೆಯಲ್ಲಿ ಸ್ನೇಹಿತರೆಲ್ಲ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ತಪ್ಪಿಸಿಕೊಂಡುಬಿಡುತ್ತಾರೆ. ವಾದ್ಯಗಳ ಸಂಗೀತದ ನಡುವೆ ಅಡ್ಡಾಡುತ್ತಿರುವಾಗ ಒಂದು ಅನಿರೀಕ್ಷಿತ ಘಟನೆ ನಡೆದುಹೋಗುತ್ತದೆ. ಅದರ ವಿವರ ಹೀಗಿದೆ.

‘ಆಗಲೇ ಅನಿರೀಕ್ಷಿತವಾದ ಆ ಘಟನೆ